**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 451/2022**

| | | | |
|---|---|---|---|
| **ಹೆಸರು** | **:** | **ಪದ್ಮಾಕರ** | |
| **ತಂದೆಯ ಹೆಸರು** | **:** | **ಸಂಗಪ್ಪ** | DW-3 |
| **ವಯಸ್ಸು** | **:** | **43 ವರ್ಷ** | **ದಿನಾಂಕಃ 29-09-2025** |
| **ಉದ್ಯೋಗ** | **:** | **ಕೂಲಿ ಕೆಲಸ** | |
| **ವಾಸಸ್ಥಳ** | **:** | **ಐನಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿತರ ಪರವಾಗಿ ಶ್ರೀ NHR ವಕೀಲರಿಂದಃ**

ದಿನಾಂಕ 05-10-2021 ರಂದು ನಾನು ಅವಿನಾಶರವರ ಹೊಲದಲ್ಲಿ ಕೂಲಿ ಕೆಲಸಕ್ಕೆಂದು ಹೋದಾಗ ಬೆಳಗ್ಗೆ 10 ರಿಂದ 10.30 ಗಂಟೆಗೆ 1ನೇ ಆರೋಪಿ ಸದರಿ ಹೋಲಕ್ಕೆ ಬಂದಿದ್ದರು. ಬೆಳಗ್ಗೆ 10.30 ಗಂಟೆ ಸುಮಾರಿಗೆ ಚಿಂಚೋಳಿಯ ಪಿ.ಎಸ್.ಐರವರ 1ನೇ ಆರೋಪಿಗೆ ಕರೆ ಮಾಡಿ ಬರಲು ಹೇಳಿದ ಕಾರಣ ಅವರು ಅಲ್ಲಿಂದ ಹೋಗಿರುತ್ತಾರೆ. ನಂತರ ಬೆಳಗ್ಗೆ 10.30 ರಿಂದ 11 ಗಂಟೆ ಸುಮಾರಿಗೆ ಮಾಣಿಕ ರೆಡ್ಡಿರವರ ಮನೆಯ ಹತ್ತಿರ ಹೋದಾಗ ಪೋಲಿಸರು ರಾಜೀ ಸಂಧಾನ ಮಾಡಿರುತ್ತಾರೆ. ನಂತರ ನಾನು ಹೊಲಕ್ಕೆ ಹೋಗಿರುತ್ತೇನೆ. ಬೆಳಗ್ಗೆ 7.30 ಗಂಟೆ ಸುಮಾರಿಗೆ 1ನೇ ಆರೋಪಿ ರಾಶಿ ಮಷಿನನ್ನು ತೆಗೆದುಕೊಂಡು ಬಂದಿದ್ದರು. ನಾನು ಸಹ ಬೆಳಗ್ಗೆ 7.30 ಗಂಟೆಗೆ ಹೋಗಿರುತ್ತೇನೆ.

ಚಾಸಾ-1ರವರ ಮನೆಯಲ್ಲಿ ಶೌಚಾಲಯವಿದೆ ಮತ್ತು ಅವರ ಮನೆಯ ಅರ್ಧ ಕಿ.ಮೀ. ದೂರದಲ್ಲಿ ಸಾರ್ವಜನಿಕ ಶೌಚಾಲಯ ಸಹ ಇದೆ. ಚಾಸಾ-1ರವರು ತಮ್ಮ ಸಂಬಂಧಿಕರ ಜಗಳದ ವಿಷಯವಾಗಿ ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ. ಕಲಾವತಿ ಮತ್ತು ಮಾಣಿಕ ರೆಡ್ಡಿರವರ ಬೀಗರಾಗಬೇಕು. 1ನೇ ಆರೋಪಿಯ ಮನೆಯ ಹಿಂದೆ ಸಾರ್ವಜನಿಕ ಶೌಚಾಲಯವಿದೆ. ಆರೋಪಿತರು ವ್ಯಾಪಾರ ಮಾಡುತ್ತಾರೆ ಮತ್ತು ಅವರ ಹತ್ತಿರ ಎರಡು ಶೋ ರೂಮ್‌ಗಳು ಇವೆ. ನನ್ನ ಮನೆ ಮತ್ತು ಆರೋಪಿತರ ಮನೆ ಅರ್ಧ ಕಿ.ಮೀ. ದೂರದಲ್ಲಿವೆ. ಕಲಾವತಿ ಮತ್ತು ಆರೋಪಿತರ ಮನೆ 3-4 ಮನೆಗಳು ಬಿಟ್ಟು ಇವೆ.

ದಿನಾಂಕ 02-10-2021ರಂದು ಬೆಳಗ್ಗೆ 10 ರಿಂದ 11 ಗಂಟೆ ಸುಮಾರಿಗೆ ಐನಾಪುರ ಗ್ರಾಮದ ಬಸವೇಶ್ವರ ಕ್ರಾಸ್ ಹತ್ತಿರ ಇದ್ದಾಗ ಗಂಗಾದರ ಮತ್ತು ಮಾಣಿಕ ರೆಡ್ಡಿರವರ ಜಗಳವಾಡುತ್ತಿದ್ದರು. ಅಲ್ಲಿ ಅಂದಾಜು 8 ರಿಂದ 10 ಜನರು ಇದ್ದರು. ಯಾವ ವಿಷಯವಾಗಿ ಜಗಳವಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಜಗಳವನ್ನ ಬಿಡಿಸಲು ಪ್ರಯತ್ನ ಪಟ್ಟಿಲ್ಲ.

**<u>ವಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**